ತಿಳಿದುಕೊಳ್ಳಲು ನಾನು ಪೆನ್ನಿ ಖರ್ಚುಮಾಡಲು ತಯಾರಿದ್ದೇನೆ..'

'ಹಾಗಿದ್ದರೆ ಕೊಡಿ...' ಆಕೆ ನಕ್ಕು ಹೇಳಿದಳು.

ಆತ ತುಂಬಾ ಗಾಂಭೀರ್ಯದಿಂದ ಜೇಬಿನಲ್ಲಿ ಕೈಹಾಕಿದ ಮತ್ತು ಒಂದು ಪೆನ್ನಿಯನ್ನು ಎತ್ತಿಕೊಟ್ಟ. ಆಕೆ ಅದನ್ನು ತೆಗೆದುಕೊಂಡು ತನ್ನ ಕೈಯ್ಯಲ್ಲಿ ಮುಚ್ಚಿಕೊಂಡಳು.

'ಹೇಳುವುದು ನಿಜ ಅಂದರೆ ನಿಜವಾಗಿರಬೇಕು...'

'ನಾನು ಯೋಚಿಸುತ್ತಿದ್ದೆ; ಸಮುದ್ರಕ್ಕೆ ಹಾರಿದರೆ ಓರ್ವಳೇ ಎಷ್ಟುದೂರದ ತನಕ ತೇಲಲು ಸಮರ್ಥಳಾಗಬಹುದು? ಅಂತ. ಮತ್ತೆ ತಾವು ಏನು ಯೋಚಿಸುತ್ತಿದ್ದಿರಿ? ಆದರೆ, ಪೆನ್ನಿ ಕೊಡಲ್ಲ...' ಅವಳು ಅದು ಯಾರೋ ಆತ್ಮೀಯರು ನೀಡಿದ ಅಮೂಲ್ಯವಾದ ಕಾಣಿಕೆಯೋ ಎನ್ನುವಂತೆ ಮುಷ್ಟಿಯನ್ನು ಎಳೆದು ಭದ್ರವಾಗಿಸಿಕೊಂಡಳು.

'ತಪ್ಪು ತಿಳಿದುಕೊಳ್ಳುವುದಿಲ್ಲವಷ್ಟೆ?' ಅವನು ಕೇಳಿದ.

'ಇಲ್ಲ' ಅವಳು ಹೇಳಿಬಿಟ್ಟಳು ಆದರೆ, ಮನಸ್ಸು ವ್ಯಾಕುಲಗೊಂಡಿತು. ಈಗ ಅದೇ ಹಳಸಿದ ಹೊಸೆದ ಪ್ರೇಮ ಪ್ರಣಯದ ಮಾತೇ ಶುರುವಾದೀತು...

'ನಾನು ಯೋಚಿಸುತ್ತಿದ್ದೆ... ಮಳೆ ಜೋರಾಗಿಬಿಟ್ಟರೆ ಇಲ್ಲಿಂದ ವೋರ್ಲಿ ತನಕ ಟ್ಯಾಕ್ಸಿಯ ಬಾಡಿಗೆ ಎಷ್ಟಾದೀತು?'

ಅವಳು ಜೋರಾಗಿ ನಕ್ಕುಬಿಟ್ಟಳು. ದುರ್ಭಾವನೆಯಿಂದಲ್ಲ; ಆನಂದಾತಿರೇಕದಿಂದ.

'ಹೋಗುವಾಗ ಅದೇ ದಾರಿಯಲ್ಲೇ ನನ್ನನ್ನು ಮನೆಹತ್ತಿರ ಬಿಟ್ಟು ಹೋದರೆ ನನ್ನ ಪಾಲು ಅರ್ಧ' ಅವಳು ಹೇಳಿದಳು.

'ಬಹಳ ಒಳ್ಳೇದು...' ಅವನು ಇದನ್ನು ಕೇಳಲಿಲ್ಲ – 'ಅವಳು ಎಲ್ಲಿ ಇರುತ್ತಾಳೆ' ಎಂದು.

ಅವಳಿಗೆ ಅನಿಸಿತು: ಜೀವನದಲ್ಲಿ ಮೊಟ್ಟ ಮೊದಲಿಗೆ, 'ಅವಳಿಗೆ ಗಂಡ ಇದ್ದಾನೆಯೆ? ಇದ್ದರೆ ಆತ ಯಾವ ಉದ್ಯೋಗ

